ಕ್ಷೇತ್ರ ಶಿಕ್ಷಣಾಧಿಕಾರಗಳ ಕಾರ್ಯಾಲಯ ಶಹರ ವಲಯ ಧಾರವಾಡ

# ಕನ್ನಡ ಭಾಷಾ ಬೋಧಕರ ಪರಿವಾರ, ಶಹರ ವಲಯ, ಧಾರವಾಡ

## ಎಸ್ ಎಸ್ ಎಲ್ ಸಿ ಮಾದರಿ ಪ್ರಶ್ನೆಪತ್ರಿಕೆ 2022 – 2023

**ವಿಷಯ :– ದ್ವಿತೀಯ ಭಾಷೆ ಕನ್ನಡ** | **ವಿಷಯದ ಸಂಕೇತ : 33K**

**ಸಮಯ :– 3 ಗಂಟೆಗಳು** | **ಗರಿಷ್ಠ ಅಂಕಗಳು : 80**

---

**I) ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಕ್ರಮಾಕ್ಷರದೊಂದಿಗೆ ಉತ್ತರ ಬರೆಯಿರಿ. 4X1=4**

1) 'ವಿಜ್ಞಾನಿ, ಪಂಡಿತ' ಪದಗಳು ನಾಮಸೂಚಕದ ಈ ಗುಂಪಿಗೆ ಸೇರುತ್ತವೆ
   ಎ) ರೂಢನಾಮ ಬಿ) ಭಾವನಾಮ ಸಿ) ಅಂಕಿತನಾಮ ಡಿ) ಅನ್ವರ್ಥನಾಮ
2) 'ಸಂಸ್ಕೃತ' ಪದದ ತದ್ಭವ ರೂಪವಿದು
   ಎ) ಸುಕೃತ್ ಬಿ) ಸಕ್ಕದ ಸಿ) ಸುಖದ ಡಿ) ಸುಖಾಂತ
3) 'ಪರಹಿತ' ಪದದ ವಿರುದಾರ್ಥಕ ಪದ ಇದಾಗಿದೆ
   ಎ) ಪರರು ಬಿ)ರಹಿತ ಸಿ) ಸ್ವಹಿತ ಡಿ) ಪರಾಶಿತ
4) 'ಸರ್ವಾಧಿಕಾರಿ' ಪದವು ಈ ಸಂಧಿಗೆ ಉದಾಹರಣೆಯಾಗಿದೆ
   ಎ)ಲೋಪಸಂಧಿ ಬಿ)ಸವರ್ಣದೀರ್ಘಸಂಧಿ ಸಿ) ಗುಣಸಂಧಿ ಡಿ) ವೃದ್ಧಿಸಂಧಿ

**II) ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ 12X1=12**

5) ಮನುಷ್ಯನ ಬದುಕಿಗೆ ಯಾವ ಸೂತ್ರ ಮಾದರಿಯಾಗಬಲ್ಲದು?
6) ಪುಟ್ಟರಾಜರು ಬ್ರೈಲ್ ಲಿಪಿಗೆ ತಂದ ಕೃತಿಗಳು ಯಾವುವು ?
7) ಯಾವ ಯಾವ ಪ್ರವಾಹಗಳ ವಿರುದ್ಧ ಬದುಕಲು ಹಕ್ಕಿಗಳಿಗೆ ಗೂಡು ಬೇಕು ?
8) ಗುರುಗಳು ಹೇಳಿದಂತೆ ಕಾಫೀ ಮತ್ತು ಕಾಫಿಯ ಕಪ್ಪು ಯಾವುದರ ಪ್ರತೀಕಗಳು ?
9) ಲಂಡನ್ ನಗರದಲ್ಲಿ ಯಾವಾಗ ಅಗ್ನಿ ದುರುಂತ ಸಂಭವಿಸಿತು ? ಅದರ ನೆನಪಿಗಾಗಿ ಏನು ಮಾಡಿದ್ದಾರೆ ?
10) ಏಣಿ ಹೇಳಿಕೊಳ್ಳುವ ಕಷ್ಟಗಳೇನು ?
11) ತಪಸ್ಸಿಗಿಂತ ಯಾವುದು ದೊಡ್ಡದೆಂದು ಸಿದ್ದಾರ್ಥ ತಿಳಿದನು ?
12) ತಿಮಿರ ಎಂದರೇನು ?
13) ಬಸವಣ್ಣನವರು ಜನರ ಯಾವ ಧಾರ್ಮಿಕ ನಂಬಿಕೆಗಳನ್ನು ಖಂಡಿಸಿದ್ದಾರೆ ?
14) ಅರ್ಜುನನು ಯಾರನ್ನು ನಾಡನರಿ ಎಂದು ಕರೆದಿದ್ದಾನೆ ?
15) ನಮ್ಮ ದುಡಿಮೆಯ ಹೂವು ಫಲಿಸುವುದು ಯಾವಾಗ ?
16) ಕನ್ನಡದ ಮೊಟ್ಟಮೊದಲ ಕವಯಿತ್ರಿ ಯಾರು ?

**III) ಈ ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ** **8X2=16**

17) ಗಿಳಿಯು ಇಂದ್ರನಲ್ಲಿ ಯಾವ ವರ ಕೇಳಿತು ?
18) ರೈತರು ಎದುರಿಸುತ್ತಿರುವ ಸಮಸ್ಯೆಗಳಾವುವು ?
19) ಹಕ್ಕಿಗಳು ಬದಲಾದ ಪರಿಸರಕ್ಕೆ ಹೊಂದಿಕೊಂಡು ಗೂಡು ಕಟ್ಟುವುದಕ್ಕೆ ಲೇಖಕರು ಯಾವ ಉದಾಹರಣೆಗಳನ್ನು ನೀಡುತ್ತಾರೆ ?
20) ಛೇಂಬರ್ ಆಫ್ ಹಾರರ್ ಒಳಗೆ ಹೋದಾಗ ಲೇಖಕರಿಗಾದ ಅನುಭವವೇನು ?
21) ಸಿದ್ಧಾರ್ಥನಿಗೆ ನಾಡಿನ ಅರ್ಥ ತಿಳಿದ ಸಂದರ್ಭವನ್ನು ಕವಿ ಏನೆಂದು ಬಣ್ಣಿಸಿದ್ದಾರೆ?
22) ಅಡಿಗರ ಪ್ರಕಾರ ಜೀವನ ಯಾವಾಗ ಸಾರ್ಥಕವಾಗುತ್ತದೆ?
23) ಭೀಮನಾಯಕನು ವೈದ್ಯರ ವಸ್ತುಗಳನ್ನು ಹಿಂತಿರುಗಿಸಿ ಏನೆಂದು ಹೇಳಿದನು ?
24) ಹೂವು ಎಲ್ಲಿ ಹೇಗೆ ಅರಳಿದೆ ? ಅದು ಹೇಗೆ ಕಾಣುತ್ತದೆ ?

**IV) ಈ ಕೆಳಗಿನ ಕವಿ/ಸಾಹಿತಿಗಳ ಸ್ಥಳ. ಕಾಲ. ಕೃತಿ ಮತ್ತು ಬಿರುದು/ ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ.** **1X3=3**

25) ಸಿ. ಪಿ. ಕೆ

**V) ಈ ಕೆಳಗಿನ ಪದ್ಯದ ಸಾರಾಂಶವನ್ನು ವಾಕ್ಯ ರೂಪದಲ್ಲಿ ಬರೆಯಿರಿ** **1X3=3**

26) ವೇಷ ಧರಿಸಿ ಫಲವೇನಯ್ಯ
ವೇಷದಂತಾಚರಣೆ ಇಲ್ಲದನ್ನಕ್ಕ
ವೇದಾಂತವನೊದಿ ಫಲವೇನಯ್ಯ
ಬ್ರಹ್ಮ ತಾನಾಗದನ್ನಕ್ಕ
ನಾನಾ ಕೆರೆಯ ತೋಡಿ ಫಲವೇನಯ್ಯ
ಪುಣ್ಯ ತೀರ್ಥಗಳು ಬರದನ್ನಕ್ಕ ಕಪಿಲಸಿದ್ದ ಮಲ್ಲಿಕಾರ್ಜುನ

**VI) ಈ ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ ಲಕ್ಷಣ ಬರೆದು ಸಮನ್ವಯಗೊಳಿಸಿರಿ** **1X3=3**

27) ಭಾವ ತಂದ ಸೀರೆಯ ಬಣ್ಣದ ಸೊಬಗಿನಂತೆ ಕುಣಿಗಲ್ ಕೆರೆಯಿದೆ.

**VII) ಈ ಕೆಳಗಿನ ಗಾದೆ ಮಾತುಗಳಲ್ಲಿ ಯಾವುದಾದರೂ ಒಂದನ್ನು ವಿಸ್ತರಿಸಿ ಬರೆಯಿರಿ** **1X3=3**

28) "ದೇಶ ಸುತ್ತು ಕೋಶ ಓದು"

ಅಥವಾ

"ಹಕ್ಕಿಗಳಿಗೆ ಗೂಡು ಮಕ್ಕಳಿಗೆ ತಾಯಿ"

**VIII) ಈ ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ 5X3=15**

29) 'ಅವರು ಯಾರಿಗೂ ಮೋಸ, ವಂಚನೆ ಮಾಡುವವರಲ್ಲ'

30) 'ಸಮಾಜದ ಹಣದಿಂದ ನನಗೆ ವಿದ್ಯೆ ಕೊಟ್ಟಿದ್ದರೆ'

31) 'ನೀವು ಗಮನಿಸಿದ್ದೀರಾ ನೀವೆಲ್ಲ ಎಂಥ ಕಪ್ಪು ಆರಿಸಿಕೊಂಡಿದ್ದೀರಿ ?

32) 'ನಾನು ತಿರಸ್ಕರಿಸಿದರೆ ಏನು ಮಾಡುತ್ತಾರೆ ಈ ಶಿಖಂಡಿಗಳು ?

33) 'ಶಿವ ಶಿವ ಕಾದಿಗೆಲಿದೆವು'

**IX) ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ 1X4=4**

34) ಕೆಸರೊಳಿದ್ದರು .............................. ಅಥವಾ ಒಂದು ಬಾಣಕೆ...................

.................................................. ..............................................

.................................................. ..............................................

................................ಸಾರ್ಥಕತೆಗೆ ...................................ಹಗಲಿರುಳು

**X) ಈ ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ 1X4=4**

35) ಗೋಪಾಲನ ತಾಯಿಯ ಭಕ್ತಿಯನ್ನು ಕುರಿತು ಬರೆಯಿರಿ

ಅಥವಾ

ಬನದ ಗೋಪಾಲನ ಹಾಡಿನ ಸಾರವನ್ನು ಬರೆಯಿರಿ

**XI) ಈ ಕೆಳಗಿನ ಗದ್ಯಭಾಗವನ್ನು ಮನಸಿನಲ್ಲಿ ಓದಿಕೊಂಡು ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

**2+2=4**

ಕಂಸಾಳೆ ಕಲೆಗಾಗಿ ಜೀವನವಿಡಿ ದುಡಿದ ಮಹದೇವಯ್ಯ ಅವರನ್ನು ಕಂಸಾಳೆ ಮಹದೇವಯ್ಯ ಎಂದೇ ಜನ ಕರೆಯುತ್ತಿದ್ದರು. ಕಂಸಾಳೇ ಎಂದರೆ ಮಹದೇವಯ್ಯ, ಮಹದೇವಯ್ಯ ಎಂದರೆ ಕಂಸಾಳೆ ಎಂದು ಗುರುತಿಸುವ ಮಟ್ಟಿಗೆ ಕಲೆ ಮತ್ತು ಅವರ ಬದುಕು ಬೆರೆತು ಹೋಗಿತ್ತು. ಮಹದೇವಯ್ಯನವರು ಹುಟ್ಟಿದ್ದು ಮೈಸೂರು ಹೊಸಬಂಡಿಕೇರಿಯಲ್ಲಿ ಇವರು ಕುಟುಂಬದವರು ಮೂಲತಃ ಮೈಸೂರು ತಾಲ್ಲೂಕಿನ ವರಕೋಡು ಹೋಬಳಿ ಬಡಗಲ ಹುಂಡಿಯವರು ಆದರೆ ಮಹದೇವಯ್ಯನವರ ತಂದೆ ನಂಜಯ್ಯನವರ ಕಾಲಕ್ಕೆ ಅವರು ಹುಟ್ಟಿದೂರು ಬಿಟ್ಟು ಮೈಸೂರು ಪಟ್ಟಣ ಸೇರಿದ್ದರು.

ಜನಪದ ಗಾಯಕರು ಬಳಸುವ ಕಂಚಿನ ತಾಳಗಳಿಗೆ 'ಕಂಸಾಳೆ' ಎನ್ನುತ್ತಾರೆ. ಸಾಧಾರಣ ತಾಳಗಳಿಗಿಂತ ಕಂಸಾಳೆ ಗಾತ್ರದಲ್ಲಿ ದೊಡ್ಡದು. ಆಕೃತಿಯಲ್ಲಿ ಭಿನ್ನವಾದುದು ಮೈಸೂರು ಜಿಲ್ಲೆ ಮತ್ತು ಸುತ್ತಮುತ್ತಲ ಭಾಗದ ಜನರು ದೀಪಾವಳಿ ಹಬ್ಬದ ಸಂದರ್ಭದಲ್ಲಿ ಮಹದೇಶ್ವರನ ಕಾವ್ಯ ಹಾಡುತ್ತ ಕಂಸಾಳೆ ತಟ್ಟುತ್ತ ಬೆಟ್ಟಕ್ಕೆ ಹೋಗುವುದು ವಾಡಿಕೆ. ಅದೊಂದು ರೀತಿ ದೇವರ ಸೇವೆ.

ಇದಲ್ಲದೆ ವಿಶೇಷ ಸಂದರ್ಭ ಆಚರಣೆಗಳಲ್ಲಿಯೂ ಹಾಡಲು ಮತ್ತು ಕುಣಿಯಲು ಕಂಸಾಳೆ ಬಳಸುತ್ತಾರೆ.

- ಪ್ರಶ್ನೆಗಳು

36) ಅ) ಮೈಸೂರು ಜಿಲ್ಲೆ ಮತ್ತು ಸುತ್ತಮುತ್ತಲಿನ ಜನರು ದೀಪಾವಳಿಯ ಸಮಯದಲ್ಲಿ ಏನು ಮಾಡುವುದು ವಾಡಿಕೆಯಾಗಿದೆ?

ಬ) ಮಹದೇವಯ್ಯನವರನ್ನು ಕಂಸಾಳೆ ಮಹದೇವಯ್ಯ ಎಂದು ಜನರು ಏಕೆ ಕರೆಯುತ್ತಿದ್ದರು?

**XII) ಈ ಕೆಳಗಿನ ಯಾವುದಾದರೂ ಒಂದು ವಿಷಯವನ್ನು ಕುರಿತು ಪ್ರಬಂಧ ಬರೆಯಿರಿ 1X4=4**

37) ಪರಿಸರ ಸಂರಕ್ಷಣೆ ನಮ್ಮೆಲ್ಲರ ಹೊಣೆ

ಅಥವಾ

ಯೋಗ ದಿನಾಚರಣೆಯ ಮಹತ್ವ

**XIII) ಈ ಕೆಳಗೆ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ**

**1X5=5**

38) ನಿಮ್ಮ ಶಾಲೆಯಲ್ಲಿ ಕೈಗೊಂಡಿರುವ ಶೈಕ್ಷಣಿಕ ಪ್ರವಾಸಕ್ಕಾಗಿ ರೂ 1000/– ನ್ನು ಕಳುಹಿಸುವಂತೆ ಕೋರಿ ನಿಮ್ಮ ತಂದೆಯವರಿಗೆ ಪತ್ರವನ್ನು ಬರೆಯಿರಿ

ಅಥವಾ

ನಿಮಗೆ ಅವಶ್ಯವಿರುವ ಪುಸ್ತಕಗಳನ್ನು ಕಳುಹಿಸಿಕೊಡುವಂತೆ ಕೋರಿ ಭಾರತ ಬುಕ್ ಹೌಸ್, ಧಾರವಾಡ ಇವರಿಗೆ ಪತ್ರ ಬರೆಯಿರಿ

ಕ್ಷೇತ್ರ ಶಿಕ್ಷಣಾಧಿಕಾರಗಳ ಕಾರ್ಯಾಲಯ ಶಹರ ವಲಯ ಧಾರವಾಡ

# ಕನ್ನಡ ಭಾಷಾ ಬೋಧಕರ ಪರಿವಾರ, ಶಹರ ವಲಯ, ಧಾರವಾಡ

## ಎಸ್ ಎಸ್ ಎಲ್ ಸಿ ಮಾದರಿ ಪ್ರಶ್ನೆಪತ್ರಿಕೆ 2022 – 2023

**ವಿಷಯ :– ದ್ವಿತೀಯ ಭಾಷೆ ಕನ್ನಡ** **ವಿಷಯದ ಸಂಕೇತ : 33K**

**ಸಮಯ :– 3 ಗಂಟೆಗಳು** **ಗರಿಷ್ಠ ಅಂಕಗಳು : 80**

---

**I) ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಕ್ರಮಾಕ್ಷರದೊಂದಿಗೆ ಉತ್ತರ ಬರೆಯಿರಿ. 4X1=4**

1) 'ಕೆರೆಯಾಗೆ' ಪದದ ಗ್ರಾಂಥಿಕ ರೂಪ.
   ಅ)ಕೆರೆಯಲ್ಲಿ ಬ) ಕೆರ್ಯಾಗ ಕ) ಕೆರೆಯಿಂದ ಡ) ಕೆರೆಯನ್ನು
2) ಕರ್ಮಪದವನ್ನು ಆಪೇಕ್ಷಿಸುವ ಧಾತುಗಳಿಗೆ ಹೀಗೆನ್ನುವರು
   ಅ)ಆಕರ್ಮಕ ಬ) ಸಕರ್ಮಕ ಕ) ಕುಕರ್ಮಕ ಡ) ಸರ್ವನಾಮ
3) ಸೈನಿಕರು ದೇಶದ ಗಡಿಯನ್ನು ಹಗಲುರಾತ್ರಿ ಕಾಯುವರು. ಈ ವಾಕ್ಯದಲ್ಲಿರುವ ಕಾಲವನ್ನು ಗುರುತಿಸಿರಿ.
   ಅ)ಭೂತಕಾಲ ಬ) ವರ್ತಮಾನಕಾಲ ಕ) ಭವಿಷತ್‌ಕಾಲ ಡ) ಮಳೆಗಾಲ
4) ಅನುಕರಣಾವ್ಯಯವನ್ನು ಗುರುತಿಸಿರಿ
   ಅ)ತುತ್ತತುದಿ ಬ)ಮನೆಮಠ ಕ) ರೊಯ್ಯನೆ ಡ) ಹೆಗಲುಕೊಡು.

**II) ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ 12X1=12**

5) ವಿಷದ ಬಾಣವು ಮರಕ್ಕೆ ಏಕೆ ತಗುಲಿತು ?
6) ಪುಟ್ಟರಾಜರು ಯಾವ ಯಾವ ಭಾಷೆಗಳಲ್ಲಿ ಪಾಂಡಿತ್ಯಗಳಿಸಿದ್ದರು ?
7) ಸಸ್ತಿನಿಗಳ ಆಶ್ರಯತಾಣಗಳು ಯಾವವು ?
8) ಗುರುಗಳು ಯಾವುದನ್ನು ದುರ್ದೈವದ ಸಂಗತಿ ಎಂದು ಬಣ್ಣಿಸಿದರು ?
9) ಏಣಿ ಜನರಿಗೆ ಮಾಡಿದ ಉಪಕಾರವೇನು ?
10) ಕೇಶಿರಾಜನು ಬರೆದ ಕನ್ನಡ ವ್ಯಾಕರಣ ಪುಸ್ತಕದ ಹೆಸರೇನು ?
11) ಏಣಿಗೆ ಬೀಳುವ ಭಯವಿಲ್ಲ ಏಕೆ ?
12) ಕಾಡನ್ನು ಅಲೆದ ಸಿದ್ದಾರ್ಥನಿಗೆ ಹೊಳೆದುದ್ದೇನು ?
13) ಸವಿಚೈತ್ರದ ಸೋಬಗು ಏನು ?
14) ಸದ್ದು ಮಾಡದಿರು ಕವಿತೆಯ ಆಕರ ಕೃತಿ ಯಾವುದು ?
15) ಕುಣಗಲ್ ಕೆರೆ ಹೇಗೆ ಬಾಗಿದೆ ?
16) ಸೊನ್ನಲಿಗೆ ಸಿದ್ಧರಾಮರ ವಚನಗಳ ಅಂಕಿತ ಯಾವುದು ?

**III) ಈ ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ** **8X2=16**

17) ಸಾಮಾನ್ಯವಾದ ಲೋಕವರ್ತನೆ ಯಾವುದು ?
18) ಥೇಮ್ಸ ನದಿಯ ಮೇಲಿರುವ ಪ್ರಸಿದ್ಧ ಸೇತುವೆಗಳಾವವು ?
19) ಹೆಡ್ ಮಾಸ್ತರರು ಮಕ್ಕಳಿಗೆ ಏನೆಂದು ಹೇಳಿ ಅಡುಗೆ ಮನೆಗೆ ಹೋದರು ?
20) ಮೇಲೇರಿದವನಿಗೆ ಏಣಿಯ ಮಹತ್ವ ಯಾವಾಗ ಅರಿವಾಗುತ್ತದೆ ?
21) ಚೈತ್ರದಲ್ಲಿ ಹಕ್ಕಿಗಳ ಕಲರವ ಹೇಗಿರುತ್ತದೆಂದು ಕವಿ ವರ್ಣಿಸಿದ್ದಾರೆ ?
22) ಬಸವಣ್ಣನವರು ಜನರ ಧಾರ್ಮಿಕ ನಂಬಿಕೆಗಳನ್ನು ಏಕೆ ಖಂಡಿಸಿದ್ದಾರೆ ?
23) ಭೀಮನಾಯಕನು ವೈದ್ಯರಿಗೆ ಏನೆಂದು ಕೃತಜ್ಞತೆಗಳನ್ನು ಸಲ್ಲಿಸಿದನು ?
24) ಹೊಳೆಯ ದಂಡೆಯ ಸಾಲಿನಲ್ಲಿ ಹಿಂದಿನ ಯಾವ ನೇನಪುಗಳಿವೆ ?

**IV) ಈ ಕೆಳಗಿನ ಕವಿ/ಸಾಹಿತಿಗಳ ಸ್ಥಳ. ಕಾಲ. ಕೃತಿ ಮತ್ತು ಬಿರುದು/ ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ.** **1X3=3**

25) ಕುವೆಂಪು

**V) ಈ ಕೆಳಗಿನ ಪದ್ಯದ ಸಾರಾಂಶವನ್ನು ವಾಕ್ಯ ರೂಪದಲ್ಲಿ ಬರೆಯಿರಿ** **1X3=3**

26) ಗಾಳಿ ಬಂದೆಡೆ ತಿರುಗುವಾ ಹೇಡಿತನವು
ದಾಳಿ ಬಂದೊಡನೆ ಶರಣೆಂಬ ಹೆಣ್ತನವು
ಬೇಡ ಹಿಡಿದೋಳ್ದಾರಿಯೊಳು ಕೊನೆಯವರೆಗೆ
ದೂಡು ಬಾಳ್ವೆಯನ್ನು ಪಾರುಷದ ಹೊನಲೊಳಗೆ.

**VI) ಈ ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ ಲಕ್ಷಣ ಬರೆದು ಸಮನ್ವಯಗೊಳಿಸಿರಿ** **1X3=3**

27) ಸೇನಾಸಾಗರ

**VII) ಈ ಕೆಳಗಿನ ಗಾದೆ ಮಾತುಗಳಲ್ಲಿ ಯಾವುದಾದರೂ ಒಂದನ್ನು ವಿಸ್ತರಿಸಿ ಬರೆಯಿರಿ** **1X3=3**

28) ಅತಿ ಆಸೆ ಗತಿಗೇಡು
ಅಥವಾ
ತಾಳಿದವನು ಬಾಳಿಯಾನು

**VIII) ಈ ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ** **5X3=15**

29) ಮಗು ಇಂದಿನಿಂದ ಇದು ನನ್ನ ಹಾರ್ಮೋನಿಯಂ ಅಲ್ಲ
30) ಇಲ್ಲಿ ವಾಸ್ತುಶಿಲ್ಪಿಯ ಕಲ್ಪನೆ ಸಾಕಾರಗೋಳ್ಳುತ್ತದೆ.
31) ಲಂಡನ್ ಮಲಗಿ ನಿದ್ರಿಸುತ್ತಿದೆಯೇ ಅನಿಸುತ್ತದೆ ?

32) ಗೊತ್ತು ಗುರಿಯು ಇಲ್ಲದೆ ಕತ್ತಲಲ್ಲಿ ನಡೆದನು.

33) "ಭಾವ ತಂದಾನೆ ಬಣ್ಣದ ಸೀರೆ"

**IX) ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ** **1X4=4**

34) ಕೆಡೆಗೆ ಹಾಯವು – – – – – – – – – –
– – – – – – – – – – – – – – – – –
– – – – – – – – – – – – – – – – –
– – – – – – – – – ----- ನಮೊಯೆಂದ.

ಅಥವಾ

ಎಂದೋಡರ್ಜುನ – – – – – – – – – – –
– – – – – – – – – – – – – – – – –
– – – – – – – – – – – – – – – – –
– – – – – – -------- ಬಿಟ್ಟಮಂಡೆಯಲಿ.

**X) ಈ ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ** **1X4=4**

35) ದೇಶದ ಬಜೆಟ್‌ನಲ್ಲಿ ರಕ್ಷಣಾ ಇಲಾಖೆಗೆ ಹೆಚ್ಚಿನ ಹಣವನ್ನು ಏಕೆ ಮೀಸಲಾಗಿಡುತ್ತದೆ ?

ಅಥವಾ

ಕೃಷಿಕ ನಾಡಿನ ಬೆನ್ನಲುಬು ಈ ಮಾತನ್ನು ಸಮರ್ಥಿಸಿ

**XI) ಈ ಕೆಳಗಿನ ಗದ್ಯಭಾಗವನ್ನು ಮನಸಿನಲ್ಲಿ ಓದಿಕೊಂಡು ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.** **2+2=4**

ಡೆಪ್ಯುಟಿ ಚನ್ನಬಸಪ್ಪನವರು ಧಾರವಾಡ ಪ್ರದೇಶದಲ್ಲಿ ಕನ್ನಡ ಭಾಷೆಯು ಉಳಿದು ಬೆಳೆದು ಬರಲು ಕಾರಣರಾದರು. ಉಪವಿದ್ಯಾಧಿಕಾರಿಯಾಗಿ ಕನ್ನಡ ಭಾಷೆಯ ಉದ್ಧಾರಕ್ಕೆ ದುಡಿದರು. ಅವರು ನಿಷ್ಠಾವಂತರೂ, ಸದಾಚಾರಿಗಳು ಆಗಿದ್ದು, ವ್ಯಾಪಾರವು ಅವರ ಮನೆತನದ ಉದ್ಯೋಗವಾಗಿತ್ತು.

1856 ರಲ್ಲಿ ಆರಂಭವಾದ ನಾರ್ಮಲ್ ಕ್ಲಾಸ್ ಎಂಬ ವಿದ್ಯಾಲಯಕ್ಕೆ ಮುಖ್ಯಾಧ್ಯಾಪಕರಾಗಿ ನೇಮಕಗೊಂಡರು. ಸರಕಾರಿ ಸೇವೆಯಲ್ಲಿದ್ದರೂ ಸಾರ್ವಜನಿಕ ಸೇವೆಯನ್ನು ಉತ್ತಮ ರೀತಿಯಿಂದ ನಿರ್ವಹಿಸಿ ಬಹುಪೂಜ್ಯ ವ್ಯಕ್ತಿಯಾಗಿ ಬಾಳಿದರು. ಶಿಕ್ಷಕರಿಗಾಗಿ ತರಬೇತಿ ಶಾಲೆ ಸ್ಥಾಪಿಸಿ ಉತ್ತರ ಕರ್ನಾಟಕದ ಸಾಂಸ್ಕೃತಿಕ ಪ್ರಗತಿಗೆ ಶ್ರಮಿಸಿದರು. ಇವರು ಸ್ಥಾಪಿಸಿದ ಪತ್ರಿಕೆ 'ಜೀವನ ಶಿಕ್ಷಣ' ಎಂಬ ಹೆಸರಿನಿಂದ ಪ್ರಚಲಿತದಲ್ಲಿದೆ ಹೀಗೆ ಚನ್ನಬಸಪ್ಪನವರು ಹಚ್ಚಿದ ಕನ್ನಡ ದೀಪದ ಬೆಳಕು ಇಂದಿಗೂ ಉಳಿದು ಬಂದಿದೆ.

*** ಪ್ರಶ್ನೆಗಳು**

36) ಅ) ಕನ್ನಡ ಭಾಷೆಯ ಉದ್ಧಾರಕ್ಕೆ ದುಡಿದವರಾರು ? ಅವರ ಮನೆತನದ ಉದ್ಯೋಗವೇನು ?

ಆ) ಚನ್ನಬಸಪ್ಪನವರು ತಮ್ಮ ಸೇವೆಯನ್ನು ಹೇಗೆ ನಿರ್ವಹಿಸಿದರು ?

**XII) ಈ ಕೆಳಗಿನ ಯಾವುದಾದರೂ ಒಂದು ವಿಷಯವನ್ನು ಕುರಿತು ಪ್ರಬಂಧ ಬರೆಯಿರಿ 1X4=4**

37) ಜ್ಞಾನಾಭಿವೃದ್ಧಿಯಲ್ಲಿ ಗ್ರಂಥಾಲಯಗಳ ಪಾತ್ರ

ಅಥವಾ

ಶಿಕ್ಷಣದಲ್ಲಿ ತಂತ್ರಜ್ಞಾನದ ಪ್ರಾಮುಖ್ಯತೆ.

**XIII) ಈ ಕೆಳಗೆ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ**

**1X5=5**

38) ನಿಮ್ಮನು ಹಾವೇರಿಯ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ ಮನೋಜ/ಸವಿತಾ ಎಂದು ಭಾವಿಸಿಕೊಂಡು ನಿಮ್ಮ ಶಾಲೆಯಲ್ಲಿ ನಡೆದ 'ಮಕ್ಕಳ ದಿನಾಚರಣೆ' ಕಾರ್ಯಕ್ರಮದ ವರದಿಯನ್ನು ಪ್ರಕಟಿಸುವಂತೆ ಸಂಪಾದಕರು ಕನ್ನಡಪ್ರಭ ದಿನಪತ್ರಿಕೆ ಬೆಂಗಳೂರು ಇವರಿಗೊಂದು ಪತ್ರ ಬರೆಯಿರಿ.

ಅಥವಾ

ನಿಮ್ಮನು ವಿಜಯಪುರದ ಸಲ್ಮಾ / ನಿತಿನ್ ಎಂದು ಭಾವಿಸಿಕೊಂಡು ನಿಮ್ಮ ಊರಿನ ಜಾತ್ರೆಯ ಬಗ್ಗೆ ಗುಲಬರ್ಗಾದ ನೆಹರು ನಗರದಲ್ಲಿರುವ ನಿಮ್ಮ ಗೆಳೆಯ/ಗೆಳತಿಯಾದ ಅಕ್ಬರ / ಲತಾ ಇವರಿಗೊಂದು ಪತ್ರ ಬರೆಯಿರಿ.

ಕ್ಷೇತ್ರ ಶಿಕ್ಷಣಾಧಿಕಾರಗಳ ಕಾರ್ಯಾಲಯ ಶಹರ ವಲಯ ಧಾರವಾಡ

# ಕನ್ನಡ ಭಾಷಾ ಬೋಧಕರ ಪರಿವಾರ, ಶಹರ ವಲಯ, ಧಾರವಾಡ

## ಎಸ್ ಎಸ್ ಎಲ್ ಸಿ ಮಾದರಿ ಪ್ರಶ್ನೆಪತ್ರಿಕೆ 2022 – 2023

**ವಿಷಯ :– ದ್ವಿತೀಯ ಭಾಷೆ ಕನ್ನಡ**      **ವಿಷಯದ ಸಂಕೇತ : 33K**

**ಸಮಯ :– 3 ಗಂಟೆಗಳು**      **ಗರಿಷ್ಠ ಅಂಕಗಳು : 80**

---

**I) ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಕ್ರಮಾಕ್ಷರದೊಂದಿಗೆ ಉತ್ತರ ಬರೆಯಿರಿ.** **4X1=4**

1) 'ತಾನು ತಾವು' ಇವು ಈ ಸರ್ವನಾಮಗಳಿಗೆ ಸಂಬಂಧಿಸಿದೆ
ಎ) ಅನ್ವರ್ಥಕ ಬಿ) ಅಂಕಿತನಾಮ ಸಿ) ಆತ್ಮಾರ್ಥಕ ಡಿ) ರೂಡನಾಮ.

2) 'ಮರವನ್ನು' ಈ ಪದದಲ್ಲಿರುವ ವಿಭಕ್ತಿ ಪ್ರತ್ಯಯ್ಯವನ್ನು ಗುರುತಿಸಿ
ಎ) ತೃತೀಯಾ ಬಿ) ಚತುರ್ಥಿ ಸಿ) ದ್ವಿತೀಯಾ ಡಿ) ಪಂಚಮಿ

3) 'ಮೈಕೊಡವಿ' ಈ ಪದವು ಯಾವ ಸಮಾಸಕ್ಕೆ ಉದಾಹರಣೆಯಾಗಿದೆ ?
ಎ) ಕರ್ಮದಾರೆ ಬಿ) ಕ್ರಿಯಾಸಮಾಸ ಸಿ) ಗಮಕಸಮಾಸ ಡಿ) ತತ್ಪುರುಷಸಮಾಸ

4) ' ಮಾಡಿದರು ' ಪದದ ದಾತು ಪದವನ್ನು ಗುರುತಿಸಿ.
ಎ) ಮಾಟ ಬಿ) ಮಾಡು ಸಿ) ಮಾಡಿದ ಡಿ) ಮಾಡಿ

**II) ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ** **12X1=12**

5) ಗಿಳಿಯನ್ನು ಕಂಡು ಇಂದ್ರನಿಗೆ ಆಶ್ಚರ್ಯವಾದದ್ದು ಏಕೆ ?
6) ಶ್ರೀ ಪಂಡಿತಾರಾಧ್ಯ ಶಿವಾಚಾರ್ಯರು ಏನೆಂದು ಖ್ಯಾತರಾಗಿದ್ದಾರೆ ?
7) ಅಮೇರಿಕಾದಲ್ಲಿ ಗ್ಯಾನೆಟ್ ಕಡಲಹಕ್ಕಿ ಗೂಡನ್ನು ಯಾವ ವಸ್ತುಗಳಿಂದ ಅಲಂಕರಿಸಿತ್ತು ?
8) ಹೆಡ್ ಮಾಸ್ತರರು ಸಂತೋಷಗೊಂಡದು ಏಕೆ ?
9) ಲಂಡನ್‌ನಲ್ಲಿರುವ ಪ್ರಸಿದ್ಧ ವಿಶ್ವವಿದ್ಯಾಲಯಗಳು ಯಾವುವು ?
10) ಗೋಪಾಲನು ಶಾಲೆಯಿಂದ ಮನೆಗೆ ಬರುವಾಗ ಏಕೆ ಭಯಪಡುತ್ತಿದ್ದನು ?
11) ಏಣಿಯನ್ನು ಬಳಸಿ ಮೇಲೇರಿದವರಿಗೆ ಏಣಿ ಹಾಕುವ ಸವಾಲು ಏನು ?
12) ಯುಗಾದಿಯ ಸಂದರ್ಭದಲ್ಲಿ ನೆಲದಮ್ಮ ಹೇಗೆ ಸಿಂಗಾರಗೊಳ್ಳುತ್ತಾಳೆ ?

13) ನಮ್ಮ ಕರ್ತವ್ಯಗಳನ್ನು ಹೇಗೆ ಮುಗಿಸಬೇಕಂದು ಕವಿ ಹೇಳಿದ್ದಾರೆ?

14) ನಮ್ಮ ದುಡಿಮೆಯ ಹೂವು ಫಲಿಸುವುದು ಯಾವಾಗ ?

15) ಕುಣಿಗಲ್ ಕೆರೆಯ ಅಂದವನ್ನು ನೋಡಲು ಯಾರು ಬಂದರೆಂದು ಉತ್ಪ್ರೇಕ್ಷಿಸಲಾಗಿದೆ?

16) ಅಕ್ಕಮಹಾದೇವಿಯ ವಚನಗಳ ಅಂಕಿತ ಹೆಸರಿಸಿ.

**III) ಈ ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ 8X2=16**

17) ಮರವನ್ನು ಬಿಟ್ಟು ಹೋಗದೆ ಇರಲು ಗಿಳಿಯು ನೀಡಿದ ಸಮರ್ಥನೆ ಏನು ?

18) ನಮ್ಮ ದೇಶದ ರಕ್ಷಣಾಪಡೆ ಏಕೆ ಪ್ರಬಲವಾಗಿರಬೇಕು ?

19) ಹಕ್ಕಿಗಳು ಗೂಡುಗಳನ್ನು ಯಾವ ರೀತಿಯಲ್ಲಿ ಅಲಂಕರಿಸುತ್ತವೆ ?

20) ಹೆಡ್ ಮಾಸ್ತರರು ಅಡುಗೆ ಮನೆಗೆ ಹೋಗಿ ಎಷ್ಟು ಕಪ್ಪುಗಳನ್ನು ತಂದರು ಹಾಗೂ ಮನೆಗೆ ಬಂದ ಮಕ್ಕಳೆಷ್ಟು ?

21) ಲಂಡನ್‌ನಲ್ಲಿ ಸಂಭವಿಸಿದ ದುರಂತಗಳ ಬಗ್ಗೆ ಗೈಡ ತಿಳಿಸಿದ ವಿಚಾರಗಳೇನು ?

22) ಮಲಗಿದ್ದ ಗೋಪಾಲನನ್ನು ತಾಯಿಯು ಯಾವ ಮಾತಿನಿಂದ ಎಳಿಸಿದಳು ?

23) ಚೈತ್ರದಲ್ಲಿ ನೆಲ ಮುಗಿಲ ಮಾಲಗ ನಡೆದಂತೆ ಭಾಸವಾಗತ್ತದೆ ಏಕೆ ?

24) ಯುದ್ಧವನ್ನು ಮಾಡದೆಯೇ ಸುಖಪಡಬಹುದೆಂಬುದನ್ನು ಉತ್ತರನು ಹೇಗೆ ಸಮರ್ಥಿಸಿದನು ?

**IV) ಈ ಕೆಳಗಿನ ಕವಿ/ಸಾಹಿತಿಗಳ ಸ್ಥಳ. ಕಾಲ. ಕೃತಿ ಮತ್ತು ಬಿರುದು/ ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ. 1X3=3**

25) ರಮೇಶಗೌಡ ಮಲ್ಲನಗೌಡ ಕಲ್ಲನಗೌಡ

**V) ಈ ಕೆಳಗಿನ ಪದ್ಯದ ಸಾರಾಂಶವನ್ನು ವಾಕ್ಯ ರೂಪದಲ್ಲಿ ಬರೆಯಿರಿ 1X3=3**

26) "ಮೇಲಂತಸ್ತು ಶಾಶ್ವತವಲ್ಲ ಸುರಕ್ಷಿತವೂ ಅಲ್ಲ
ನಾನು ಬುನಾದಿಯನ್ನೇ ಕೆಡವುತ್ತೇನೆಂದರೆ
ಏನು ಮಾಡುತ್ತಾರೆ ಈ ತ್ರಿಶಂಕುಗಳು"

**VI) ಈ ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ ಲಕ್ಷಣ ಬರೆದು ಸಮನ್ವಯಗೊಳಿಸಿರಿ 1X3=3**

27) ನಾಡ ನರಿ

**VII) ಈ ಕೆಳಗಿನ ಗಾದೆ ಮಾತುಗಳಲ್ಲಿ ಯಾವುದಾದರೂ ಒಂದನ್ನು ವಿಸ್ತರಿಸಿ ಬರೆಯಿರಿ 1X3=3**

28) ಒಕ್ಕಲಿಗ ಒಕ್ಕದಿರೆ ಜಗವೆಲ್ಲ ಬಿಕ್ಕುವುದು.

ಅಥವಾ

ಹಾಸಿಗೆ ಇದ್ದಷ್ಟು ಕಾಲು ಚಾಚು.

**VIII) ಈ ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ 5X3=15**

29) ಇವರೆಲ್ಲ ಬಸ್ಸೋ, ರೈಲೋ ಹಿಡಿಯಲು ತರಾತುರಿಯಿಂದ ಹೊರಟಿದ್ದರು?

30) ಸಾವಿರಾರು ಮಳೆಬಿಲ್ಲುಗಳು ಸೇರಿ ಕುಣಿದಂತೆ ತೋರುತ್ತಿತ್ತು.

31) ಹುಟ್ಟಿದ ಮಕ್ಕಳಿಗೆ ಬದುಕಿನ ಪಾಠ ಹೇಳುವ ಶಾಲೆ ಅದು.

32) ಸಿಡುಕು ಮಿಡುಕನು ತೊರೆದು ಮೌನಿಯಾಗು.

33) ನಾಡ ನರಿಯವೊಲು ಹಲುಗಿರಿಯೆ ಬಿಡುವೆನೆ.

**IX) ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ 1X4=4**

34) ಏಕಾಂಗಿ ವೀರನಂತೆ – – – – – – – – – –

– – – – – – – – – – – – – – – – –

– – – – – – – – – – – – – –– – –

– –– – – – – – – – – – – – –ನಡೆದನು.

ಅಥವಾ

ಕಾಡು ಕಾಡು – – – – – – – – – – –

– – – – – – – – – – – – – – – – –

– – – – – – – – – – – – – – – –

– – – – – – – – – – – – – ಕಂಡಿತು.

**X) ಈ ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ 1X4=4**

35) ಗುರಿ ಪದ್ಯದ ಸಾರಾಂಶವನ್ನು ಬರೆಯಿರಿ.

ಅಥವಾ

ನರನ ಜೀವನದ ಗುರಿ ಯಾವುದಾಗಿರಬೇಕೆಂದು ಅಡಿಗರು ಆಶಿಸಿದ್ದಾರೆ.

**XI) ಈ ಕೆಳಗಿನ ಗದ್ಯಭಾಗವನ್ನು ಮನಸಿನಲ್ಲಿ ಓದಿಕೊಂಡು ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

**2+2=4**

ವಾಜಶ್ರವಸ ಎಂಬ ಋಷಿಯ ಮಗ ನಚಿಕೇತ , ವಾಜಶ್ರವಸನು ವಿಶ್ವಜಿತ್ ಎಂಬ ಯಾಗದ ಸಿದ್ಧತೆಯಲ್ಲಿದ್ದ. ಅಲ್ಲಿಗೆ ಬಂದ ನಚಿಕೇತನು ಉಪಯೋಗವಿಲ್ಲದ ಹಸುಗಳನ್ನು ತಂದೆ ದಾನ ಮಾಡುತ್ತಿದ್ದುದನ್ನು ಗಮನಿಸಿದ ತನಗೆ ಪ್ರಿಯವಾದುದನ್ನೇ ದಾನ ಮಾಡುವುದು ಶ್ರೇಷ್ಠದಾನ ಎಂದು ತಾಯಿಯಿಂದ ಕೇಳಿದವನಿಗೆ ತಂದೆಯ ಕಾಯಕ ಸಮಾಧಾನ ತರಲಿಲ್ಲ. ತಂದೆಗೆ ಅತಿ ಪ್ರಿಯನಾದ ನಾನೇ ದಾನ ಮಾಡಲ್ಪಟ್ಟರೆ ತಂದೆಗೆ ಶ್ರೇಯಸ್ಕರವರವೆಂದು ತಿಳಿದ. ತಂದೆಯಲ್ಲಿಗೆ ಬಂದು ಪದೇ ಪದೇ "ನನ್ನನ್ನು ಯಾರಿಗೆ ದಾನ ಮಾಡುತ್ತೀರಿ" ಎಂದು ಪ್ರಶ್ನಿಸತೊಡಗಿದ.

ಮುಂಗೋಪಿಯಾಗಿದ್ದ ವಾಜಶ್ರವಸ ಋಷಿಯು "ನಿನ್ನನ್ನು ಮೃತ್ಯುವಿಗೆ ದಾನ ಮಾಡಿದ್ದೇನೆ" ಎಂದು ಬಿಟ್ಟ ತಂದೆಯ ಮಾತು ಪೂರೈಸಲು ನಚಿಕೇತ ಯಮಲೋಕಕ್ಕೆ ಹೋದ ಅಲ್ಲಿ ಯಮನಿಲ್ಲದ ಕಾರಣ ಮೂರು ದಿನ ಕಾದು ಕುಳಿತ.

ನಂತರ ಬಂದ ಯಮನು ನಚಿಕೇತನ ಧೈರ್ಯ , ಸಾಧನೆಗಳಿಂದ ಹರ್ಷಿತನಾಗಿ ಮೂರು ವರ ಕೇಳುವಂತೆ ಹೇಳಿದ. ನಚಿಕೇತನು ಒಂದನೇವರದಲ್ಲಿ ತನ್ನ ತಂದೆಗೆ ಸಂತೃಪ್ತಿ ಸಿಗಲೆಂದು ಕೇಳಿದ ಯಮ "ತಥಾಸ್ತು" ಎಂದ. ಎರಡನೇ ವರದಲ್ಲಿ ಅಗ್ನಿವಿದ್ಯೆಯನ್ನು ದಯಪಾಲಿಸಬೇಕೆಂದು ಕೇಳಿಕೊಂಡ. ದೈವತ್ವ ಸಿಗುವ ಆ ವಿದ್ಯೆಯನ್ನು ಯಮ ದಯಪಾಲಿಸಿ ಅದು "ನಚಿಕೇತಾಗಿ ಎಂದು ಪ್ರಸಿದ್ದವಾಗಲಿ" ಎಂದು ಹರಸಿದ. ಮೂರನೆಯ ವರದಲ್ಲಿ ನಚಿಕೇತ ಜನ್ಮಾಂತರಗಳ ರಹಸ್ಯ ಅಡಗಿರುವ ಆತ್ಮ ವಿದ್ಯೆಯನ್ನು ಕೇಳಿದ ನಚಿಕೇತ ಜ್ಞಾನವಿದ್ಯೆಯನ್ನು ತಂದ ಮಹಾನುಭಾವ.

**ಪ್ರಶ್ನೆಗಳಗೆ ಉತ್ತರಿಸಿರಿ**

36) ಅ) ನಚಿಕೇತ ಯಾರ ಮಗ ? ತಂದೆಯಲ್ಲಿ ಕೇಳಿದ ಪ್ರಶ್ನೆ ಏನು ?

ಆ) ನಚಿಕೇತ ಯಮನಿಂದ ಪಡೆದ ವರಗಳಾವವು ?

**XII) ಈ ಕೆಳಗಿನ ಯಾವುದಾದರೂ ಒಂದು ವಿಷಯವನ್ನು ಕುರಿತು ಪ್ರಬಂಧ ಬರೆಯಿರಿ 1X4=4**

37) "ಪ್ರವಾಹದಿಂದಾಗುವ ಅನಾಹುತಗಳು"

ಅಥವಾ

"ರಾಷ್ಟ್ರೀಯ ಹಬ್ಬಗಳ ಪ್ರಾಮುಖ್ಯತೆ"

**XIII) ಈ ಕೆಳಗೆ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ**

**1X5=5**

38) ನಿಮ್ಮನ್ನು ಕಾರವಾರ ಜಿಲ್ಲೆಯ ಯಲ್ಲಾಪುರ ತಾಲೂಕಿನ ಕಿರವತ್ತಿ ಗ್ರಾಮದ ನಿವಾಸಿ ಶ್ರುತಿ/ಸಂದೇಶ ಎಂದು ಭಾವಿಸಿ ನಿಮ್ಮ ಊರಿನ ಕುಡಿಯುವ ನೀರಿನ ಸಮಸ್ಯೆ ಕುರಿತು ಗ್ರಾಮ ಪಂಚಾಯಿತಿ ಅಧ್ಯಕ್ಷರಿಗೆ ಪತ್ರ ಬರೆಯಿರಿ.

ಅಥವಾ

ನಿಮ್ಮನು ಸರಕಾರಿ ಪ್ರೌಢಶಾಲೆ ಕೊನನಹಳ್ಳಿಯ ವಿದ್ಯಾರ್ಥಿ ಸುರೇಶ /ಭಾವನಾ ಎಂದು ಭಾವಿಸಿಕೊಂಡು ನಿಮ್ಮಶಾಲೆಯ ವಾರ್ಷಿಕ ಕ್ರೀಡಾಕೂಟವನ್ನು ನೋಡಲು ಬರುವಂತೆ ಕೋಲಾರದಲ್ಲಿರುವ ನಿಮ್ಮ ತಂದೆಗೆ ಪತ್ರವೊಂದನ್ನು ಬರೆಯಿರಿ.

ಕ್ಷೇತ್ರ ಶಿಕ್ಷಣಾಧಿಕಾರಗಳ ಕಾರ್ಯಾಲಯ ಶಹರ ವಲಯ ಧಾರವಾಡ

# ಕನ್ನಡ ಭಾಷಾ ಬೋಧಕರ ಪರಿವಾರ, ಶಹರ ವಲಯ, ಧಾರವಾಡ

## ಎಸ್ ಎಸ್ ಎಲ್ ಸಿ ಮಾದರಿ ಪ್ರಶ್ನೆಪತ್ರಿಕೆ 2022 – 2023

**ವಿಷಯ :– ದ್ವಿತೀಯ ಭಾಷೆ ಕನ್ನಡ** **ವಿಷಯದ ಸಂಕೇತ : 33K**

**ಸಮಯ :– ಸಮಯ :– 3 ಗಂಟೆಗಳು** **ಗರಿಷ್ಠ ಅಂಕಗಳು : 80**

---

**I) ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಕ್ರಮಾಕ್ಷರದೊಂದಿಗೆ ಉತ್ತರ ಬರೆಯಿರಿ.** **4X1=4**

1) ನಾಲ್ಕು ಮಾತ್ರೆಗಳಿಂದ ಕೂಡಿದ ಪದವಿದು ____________

ಎ) ಮೆಲ್ಲನೆ ಬಿ) ಹಾಯ್ದನಂ ಸಿ) ಹಾಯವು ಡಿ)ನಗುತ.

2) 'ಪದೇ ಪದೇ' – ಪದವು ಈ ವ್ಯಾಕರಣಾಂಶಕ್ಕೆ ಉದಾಹರಣೆಯಾಗಿದೆ ________

ಎ)ದ್ವಿರುಕ್ತಿ ಬಿ) ಜೋಡುನುಡಿ ಸಿ) ಮಡಿಗಟ್ಟು ಡಿ)ಅನುಕರಣಾವ್ಯಯಂ

3) 'ನಿಟ್ಟೋಟ' – ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ ________

ಎ)ದ್ವಿಗು ಬಿ)ಕ್ರೀಯಾ ಸಿ)ಕರ್ಮಧಾರೆಯ ಡಿ)ಗಮಕ

4) 'ನೊಡುತ್ತಾನೆ' – ಪದದ ನಿಷೇದಾರ್ಥ ಪದಕ್ಕೆ ಉದಾಹರಣೆ ________

ಎ)ನೋಡುವನು ಬಿ) ನೋಡಿದನು ಸಿ)ನೋಡನು ಡಿ)ನೋಡೆನು

**II) ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ** **12X1=12**

5) ಬೇಡನು ಯಾವ ಊರಿನಲ್ಲಿ ವಾಸಿಸುತ್ತಿದ್ದನು ?
6) ಅಸಿ – ಮಸಿ ಎಂದರೇನು ?
7) ಶ್ರೇಷ್ಠ ಗುರುವಿನಲ್ಲಿ ಎಂತಹ ಶಕ್ತಿ ಇರುತ್ತದೆ ?
8) ಅಸ್ಪೃಶ್ಯತೆ ಆಚರಿಸುವ ಹಕ್ಕಿಗಳು ಮನುಷ್ಯನಿಗೆ ಯಾವ ಪಾಠ ಹೇಳುತ್ತವೆ ?
9) ಗುರುರಾಜ ಕರ್ಜಗಿ ಅವರ ಅಂಕಣ ಬರಹದ ಶೀರ್ಷಿಕೆ ಯಾವುದು ?
10) ಪ್ಲಾಸಿ ಕದನ ನಡೆದ ವರ್ಷ ಯಾವುದು ?
11) ಅಕ್ಕಮಹಾದೇವಿಯು ತನ್ನ ಬದುಕು ಯಾವಾಗ ಫಲದಾಯಕ ಆಗುತ್ತದೆಂದು ಹೇಳುತ್ತಾಳೆ ?
12) ಕವಯತ್ರಿ ತ್ರಿಶಂಕುಗಳು ಎಂದು ಯಾರನ್ನು ಕರೆದಿದ್ದಾರೆ ?
13) ಬುದ್ದನು ಅರಿತುಕೊಂಡ ಬದುಕಿನ ಅರ್ಥ ಯಾವುದು ?

14) ಅಡಿಗರ ಪ್ರಕಾರ ಹರುಷದ ಬಾಳ್ವೆ ಯಾವುದು ?

15) ಕೆರೆಯಲ್ಲಿ ಯಾವ ಮೀನುಗಳು ಇದ್ದವು?

16) ಧನವಿದ್ದವರಲ್ಲಿ ಇರಬೇಕದ ಗುಣ ಯಾವುದು ?

**III) ಈ ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ 8X2=16**

17) ಪೆನ್ನು ಖಡ್ಗಕ್ಕಿಂತ ಹರಿತವಾದುದು ಎಕೆ ?

18) ನೀಲಿ ಸಾಮ್ರಾಟ ಹಾಗೂ ಸಗ್ಗದಕ್ಕಿ ಗೂಡುಗಳ ವಿಶೇಷತೆ ಏನು ?

19) ಭಗವಂತ ಕೊಟ್ಟ ಈ ಬದುಕನ್ನು ಯಾವ ರೀತಿ ನಡೆಸಬೇಕೆಂದು ಗುರುಗಳು ಹೇಳಿದರು ?

20) ಟವರ್ ಆಫ್ ಲಂಡನನ್ನು ನಿಗೂಢ ಸ್ಥಳ ಎಂದು ಎಕೆ ಕರೆಯುತ್ತಾರೆ ?

21) ಸಿದ್ಧಾರ್ಥನು ಬುದ್ಧನಾದ ಸಂದರ್ಭದಲ್ಲಿ ಕಾಡಿನ ತುಂಬ ಪ್ರೀತಿ ಹೇಗೆ ತುಂಬಿಕೊಂಡಿತು ?

22) ಬಾಳೆ ಮೀನುಗಳು ಬೊಬ್ಬೆ ಹೊಡೆಯಲು ಕಾರಣವೇನು ?

23) ವೈದ್ಯರ ಯಾವ ಮಾತುಗಳು ಭೀಮನಾಯಕನ ಮನಸ್ಸನ್ನು ಚುಚ್ಚಿದವು ?

24) ಮನಕುಲದ ಭವ್ಯ ಬದಕು ಯಾವ ರೀತಿ ಅರಳಬೇಕಿದೆ ?

**IV) ಈ ಕೆಳಗಿನ ಕವಿ/ಸಾಹಿತಿಗಳ ಸ್ಥಳ. ಕಾಲ. ಕೃತಿ ಮತ್ತು ಬಿರುದು/ ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ. 1X3=3**

25) ಶ್ರೀ ಪಂಡಿತಾರಧ್ಯ ಶಿವಾಚಾರ್ಯ.

**V) ಈ ಕೆಳಗಿನ ಪದ್ಯದ ಸಾರಾಂಶವನ್ನು ವಾಕ್ಯ ರೂಪದಲ್ಲಿ ಬರೆಯಿರಿ 1X3=3**

26) ತಟ್ಟೆಯೊಳು ಕರ್ಪೂರ ಮೌನದಲಿ ಕರಗುವೊಲು,
ದೀಪದೆದುರಿಗೆ ತಿಮಿರ ಸರಿಯುವಂತೆ
ಶಾಂತಿಯಲಿ ಬದುಕಿ ನೀ ಕರ್ತವ್ಯವನು ಮುಗಿಸು,
ಕೂಗಾಡಿ, ಹಾರಾಡಿ ಫಲವದೇನು ?

**VI) ಈ ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ ಲಕ್ಷಣ ಬರೆದು ಸಮನ್ವಯಗೊಳಿಸಿರಿ 1X3=3**

27) ಮಗುವಿನ ಮುಖ ಚಂದ್ರನಂತೆ ಮನೋಹರವಾಗಿದೆ.

**VII) ಈ ಕೆಳಗಿನ ಗಾದೆ ಮಾತುಗಳಲ್ಲಿ ಯಾವುದಾದರೂ ಒಂದನ್ನು ವಿಸ್ತರಿಸಿ ಬರೆಯಿರಿ 1X3=3**

28) "ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು"

ಅಥವಾ

"ಕೈ ಕೆಸರಾದರೆ ಬಾಯಿ ಮೊಸರು"

**VIII) ಈ ಈ ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ**

**5X3=15**

29) "ಏನಾದರೂ ವರವನ್ನು ಕೇಳು ಕೊಡುತ್ತೆನೆ "

30) "ಅವನು ಬಂದರೆ ಕರೆದುಕೊಂಡು ಹೋಗು ತಾಯಿ"

31) "ಸಾವಿರಾರು ಮಳೆ ಬಿಲ್ಲಿಗಳು ಸೇರಿ ಕುಣಿದಂತೆ ತೋರುತ್ತಿತ್ತು"

32) "ನಮ್ರತೆಗೆ ನಾ ಕರಗುತ್ತೆನೆ"

33) ಒಂದು ಜೀವನಕೇಕೆ ಹಲವು ಸಾದ್ಯಗಳು ?

**IX) ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ** **1X4=4**

34) ಕೊರಡ ಕೊನರಿಸಿ– – –– – – – – – – – –

– – – – – – – – – – – – – – – – – – –

–– – – – – – – – – – – – – – – – – –

– – – – – – – – – – – – – – – ಮತ್ತೇರಿದೆ.

ಅಥವಾ

ಯುಗದ ಹಿಂದಿನ – – – – – – – – – – – –

– – – – – – – – – – – – – – – – – – –

– – – – – – – – – – – – – – – – – – –

– – – – – – – – – – – – – – – ಸವಿಚೈತ್ರವು.

**X)ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ** **1X4=4**

35) ಅರ್ಜುನ ಮತ್ತು ಉತ್ತರ ಇವರ ಸಂಭಾಷಣೆಯ ಸ್ವಾರಸ್ಯವನ್ನು ಬರೆಯಿರಿ.

ಅಥವಾ

ಅರ್ಜುನ ಮತ್ತು ಉತ್ತರನ ಗುಣ ಸ್ವಭಾವಗಳಲ್ಲಿ ಯಾವ ವ್ಯತ್ಯಾಸಗಳು ಕಂಡು ಬರುತ್ತವೆ ?

**XI)ಕೆಳಗಿನ ಗದ್ಯಭಾಗವನ್ನು ಮನಸಿನಲ್ಲಿ ಓದಿಕೊಂಡು ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

**2+2=4**

ಇಂದು ಮನುಷ್ಯನ ಸುತ್ತಲಿನ ಬದುಕು ಕಲ್ಪನೆಗಳ ಒಂದು ಬೃಹತ್ತಾದ ಜಾಲ, ವಿಜ್ಞಾನ ತಂತ್ರಜ್ಞಾನ ಮುಂದೆ ಭೌತಿ ತಿಳುವಿಕೆ, ಸಂಶೋಧನೆಗೆ ಕಲ್ಪನೆಯು ಅವಶ್ಯ, ಆದರೆ ಈ ಕಲ್ಪನೆಯು ಮನಷ್ಯನ ಮಾನಸಿಕ ಜೀವನದಲ್ಲಿಯೂ ಸೂತ್ರಧಾರವಾಗಿಬಿಟ್ಟಿದೆ. ಇದೇ ಮನುಷ್ಯನ ಸಕಲ ದು:ಖ ದುಮ್ಮಾನಗಳಿಗೆ ಮೂಲ ಕಾರಣ. ರಾಷ್ಟ್ರ, ಧರ್ಮ, ಜನಾಂಗ, ಮತ, ಉದ್ದಾರಕ, ರಕ್ಷಕ, ಪುಣ್ಯ , ಪಾಪ, ಸ್ವಭಿಮಾನ, ದ್ವೇಷ, ಅಸೂಯೆ, ಹೊಟ್ಟೆಯುರಿ ಮುಂತಾದವು ಯುದ್ದದ ಕಲ್ಪನೆಗೆ ಕಾರಣಗಳಾಗಿವೆ.

- **ಪ್ರಶ್ನೆಗಳಗೆ ಉತ್ತರಿಸಿರಿ**

36) ಅ) ಮನುಷ್ಯನ ಸಕಲ ದು:ಖ ದುಮ್ಮಾನಗಳಿಗೆ ಮೂಲ ಕಾರಣ ಯಾವುದು ?
ಆ) ಯುದ್ದದ ಕಲ್ಪನೆಗೆ ಕಾರಣಗಳಾವವು ?

**XII) ಕೆಳಗಿನ ಯಾವುದಾದರೂ ಒಂದು ವಿಷಯವನ್ನು ಕುರಿತು ಪ್ರಬಂಧ ಬರೆಯಿರಿ** **1X4=4**

37) ಸಾಂಕ್ರಾಮಿಕ ರೋಗ ತಡೆಗಟ್ಟುವಲ್ಲಿ ಸ್ವಚ್ಛತೆಯ ಮಹತ್ವ

ಅಥವಾ

ಪರಿಸರ ಮಾಲಿನ್ಯಕ್ಕೆ ಕಾರಣಗಳು ಹಾಗೂ ಪರಿಹಾರೋಪಾಯಗಳು.

**XIII) ಕೆಳಗೆ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ**

**1X5=5**

38) ನಿಮ್ಮನ್ನು ಹಾವೇರಿಯ ಸರಕಾರಿ ಪ್ರೌಢಶಾಲೆಯ ಸತೀಶ / ಶಿಲ್ಪಾ ಎಂದು ಭಾವಿಸಿಕೊಂಡು ನೀವು ವಾಸಿಸುವ ಬಡಾವಣೆಯಲ್ಲಿ ಹಾಳಾದ ರಸ್ತೆಯನ್ನು ದುರಸ್ತಿ ಮಾಡುವಂತೆ ವಿನಂತಿಸಿ ಜಿಲ್ಲಾ ಪಂಚಾಯತ ಅಧ್ಯಕ್ಷರಿಗೊಂದು ಮನವಿ ಪತ್ರ ಬರೆಯಿರಿ.

ಅಥವಾ

ನಿಮ್ಮನ್ನು ವಿದ್ಯಾರಣ್ಯ ಪ್ರೌಢ ಶಾಲೆ ಧಾರವಾಡದ ಸುಜಲ/ಸುಜಾತಾ ಎಂದು ಭಾವಿಸಿಕೊಂಡು ನಿಮ್ಮ ಶಾಲೆಯಲ್ಲಿ ಆಚರಿಸಿದ ವನಮಹೋತ್ಸವದ ಕುರಿತು ಬೆಳಗಾವಿಯಲ್ಲಿರುವ ನಿಮ್ಮ ಅಣ್ಣನಾದ ದರ್ಶನಿಗೊಂದು ಪತ್ರ ಬರೆಯಿರಿ.